# ಭತ್ತದೊಡವೆ!



'ತಿಂದರೆ ಆಹಾರವಾದೆ, ತೊಟ್ಟರೆ ಆಭರಣವಾದೆ..' ಎಂದು ಫ್ಯಾಷನ್ ಪ್ರಿಯರು ಹೇಳುವ ಕಾಲ ಸನ್ನಿಹಿತವಾಗಿದೆ. ಏಕೆಂದರೆ ಇದು 'ಭತ್ತ'ದ ಆಭರಣ.

★ ಸುಚೇತನಾ



ಆಭರಣ ಎಂದಾಕ್ಷಣ ನೆನಪಿಗೆ ಬರುವುದು ಪ್ಲಾಟಿನಂ, ವಜ್ರ, ಚಿನ್ನ, ಬೆಳ್ಳಿಯ ವೈವಿಧ್ಯ ನೋಟ. ಇವೆಲ್ಲ ಕೊಳ್ಳಲು ಶಕ್ತಿ ಇಲ್ಲದವರಿಗೆ ಒಂದು ಗ್ರಾಂ ಗೋಲ್ಡ್ ಕೊನೆಯದಾಗಿ ರೋಲ್ಡ್‌ಗೋಲ್ಡ್ ಇವಿಷ್ಟೇ...

ಆದರೆ ಇಲ್ಲಿ ಹೇಳಹೊರಟಿರುವ ಆಭರಣ ಭತ್ತದ ಆಭರಣ. ಭತ್ತದಿಂದ ಆಭರಣವೇ ಎಂದು ಅಚ್ಚರಿ ಪಡಬೇಡಿ.

ಫ್ಯಾಷನ್ ನಿಂತ ನೀರಲ್ಲ. ಕಾಲಕಾಲಕ್ಕೆ ಬದಲಾಗುತ್ತಲೇ ಇರುವ ವಿದ್ಯಮಾನ. ಅದರಲ್ಲೂ ಈಗ ಜನರಿಗೆ ನೈಸರ್ಗಿಕ ಆಹಾರದತ್ತ ಒಲವು ಹೆಚ್ಚಾಗಿದೆ. ದಿನವೂ ದೂಳು ತಿನ್ನುತ್ತಾ, ಹತ್ತು ಹಲವು ರೋಗಗಳನ್ನು ಹಿಡಿಸಿಕೊಳ್ಳುತ್ತಿರುವ ಮಹಾನಗರಗಳ ಜನರು ಇದೀಗ ಸಾವಯವ, ನೈಸರ್ಗಿಕ ಎಂದೆಲ್ಲ ತಲೆ ಕೆಡಿಸಿಕೊಳ್ಳುತ್ತಿದ್ದಾರೆ.

ಇದು ಆಹಾರದ ಮಾತಾಯಿತು. ಇನ್ನು ಒಡವೆಯೂ ನೈಸರ್ಗಿಕವೇ ಆಗಿದ್ದರೆ ಹೇಗಿರುತ್ತದೆ ಎಂದು ಫ್ಯಾಷನ್ ಪ್ರಪಂಚದ ದಿಗ್ಗಜರು ಆಲೋಚಿಸಿದಂತಿದೆ. ಅದಕ್ಕಾಗಿ ನಿರ್ಜೀವ ಎನಿಸಿರುವ ವಸ್ತುಗಳಿಂದ ಆಭರಣ ತಯಾರಿಸಿ ಅದಕ್ಕೊಂದಿಷ್ಟು ರಾಸಾಯನಿಕ ಸೇರಿಸಿ ಕೃತಕ ಆಭರಣ ಮಾಡುವ ಬದಲು ನೈಸರ್ಗಿಕ ಒಡವೆಯತ್ತ ಅವರು ಒಲವು ತೋರಿದ್ದಾರೆ. ಇದರ ಫಲಿತಾಂಶವೇ ಭತ್ತದ ಆಭರಣ.

ಅಡಿಯಿಂದ ಮುಡಿಯವರೆಗೆ ಧರಿಸಬಹುದಾದ ಎಲ್ಲ ಆಭರಣಗಳನ್ನೂ ಭತ್ತದಿಂದ ತಯಾರಿಸಲಾಗುತ್ತಿದೆ. ಪ್ರಸಿದ್ಧ ಆಭರಣ ಮಳಿಗೆಗಳಲ್ಲಿ ಇದು ಲಭ್ಯವಿದ್ದರೂ ಆನ್‌ಲೈನ್ ವಹಿವಾಟು ಬಲುಜೋರು. ಅದರಲ್ಲೂ ಕಿವಿಯೋಲೆ, ಪೆಂಡೆಂಟ್, ನೆಕ್‌ಲೆಸ್, ಬಳೆಗಳ ಖರೀದಿ ಭರಾಟೆ ಜೋರಾಗಿದೆ.





ಮ್ಯಾಚಿಂಗ್‌ಗೆ ಈಗಿನ ಲಲನೆಯರು ಮಾತ್ರವೇಕೆ ಮಹಿಳೆಯರೂ ಇಷ್ಟಪಡುತ್ತಾರೆ ಎಂಬುದು ಫ್ಯಾಷನ್ ಪ್ರಪಂಚದಲ್ಲಿ ಗುಟ್ಟಾಗಿ ಏನೂ ಉಳಿದಿಲ್ಲ. ಆದರೆ ಭತ್ತದ ಬಣ್ಣ ಇರುವುದು ಕೇವಲ ಹಳದಿ. ಹೀಗಂತ ಮ್ಯಾಚಿಂಗ್ ಪ್ರಿಯರು ಬೇಸರ ಪಟ್ಟುಕೊಳ್ಳುವ ಅಗತ್ಯವಿಲ್ಲ. ಅಂದ ಮಾತ್ರಕ್ಕೆ ರಾಸಾಯನಿಕ ಬಳಸಿ ಭತ್ತದ ಬಣ್ಣವನ್ನೇ ಬದಲಾಯಿಸುತ್ತಾರೆ ಎಂದುಕೊಂಡರೂ ನಿಮ್ಮ ಊಹೆ ತಪ್ಪು. ಏಕೆಂದರೆ ಮೊದಲೇ ಹೇಳಿದ ಹಾಗೆ ಇಲ್ಲಿ ಎಲ್ಲವೂ ನೈಸರ್ಗಿಕ. ನೈಸರ್ಗಿಕ ಬಣ್ಣದ ಉಪಯೋಗ ಮಾಡಿ ಭತ್ತಕ್ಕೆ ವಿವಿಧ ಬಣ್ಣಗಳ ಮೆರುಗು ನೀಡಲಾಗುತ್ತದೆ. ಒರಿಜಿನಲ್ ಹಳದಿ ಬಣ್ಣವೇ ಬೇಕು ಎನ್ನುವವರಿಗಾಗಿ ಆಭರಣದ ನಡುವೆ ವಿವಿಧ ಬಣ್ಣದ ಹರಳುಗಳನ್ನು ಜೋಡಿಸಿ ಮ್ಯಾಚಿಂಗ್‌ಗೆ ಅನುಕೂಲ ಮಾಡಿಕೊಡಲಾಗುತ್ತದೆ. ಇದಕ್ಕೆಂದೇ ನಾನಾ ಆಕಾರಗಳ ಮಷಿನ್‌ಗಳನ್ನೂ ತಯಾರಿಸಲಾಗಿದ್ದು, ಸಂಪೂರ್ಣ ಆಭರಣ ರೆಡಿಯಾದ ಮೇಲೆ 'ಇದು ಭತ್ತದ್ದು' ಎಂದರೆ ನಂಬಲು ಅಸಾಧ್ಯ ಎನ್ನುವಂಥ ರೂಪು ಪಡೆಯುತ್ತದೆ.

ಹಾಗೆಯೇ, ಭತ್ತದ ಸಿಪ್ಪೆಯನ್ನು ತೆಗೆದು ಅರ್ಥಾತ್ ಅಕ್ಕಿಯಲ್ಲೂ ಹಲವು ವಿಧಗಳ ಒಡವೆಯನ್ನೂ ತಯಾರಿಸಲಾಗುತ್ತದೆ. ಅಕ್ಕಿಗೆ ಬಣ್ಣ ಹಾಕಲು ಸುಲಭವಾಗಿರುವ ಕಾರಣ, ಬಣ್ಣಗಳನ್ನು ಹಾಕುವ ಮುನ್ನ ಭತ್ತದ ಸಿಪ್ಪೆಯನ್ನು ತೆಗೆದು ಅದಕ್ಕೆ ಅಗತ್ಯಕ್ಕೆ ತಕ್ಕಂಥ ಬಣ್ಣಗಳನ್ನು ತುಂಬಲಾಗುತ್ತದೆ. ಸಿಪ್ಪೆ ತೆಗೆಯದೆಯೂ ಬಣ್ಣಬಣ್ಣದ ಭತ್ತದ ಆಭರಣ ಲಭ್ಯ.

'ತಿಂದರೆ ಆಹಾರವಾದೆ, ತೊಟ್ಟರೆ ಆಭರಣವಾದೆ..' ಎಂದು ಫ್ಯಾಷನ್ ಪ್ರಿಯರು ಈಗ ಅಂದುಕೊಳ್ಳುತ್ತಿದ್ದಾರೆ!